



★ ಬೆಡ್, ಸೋಫಾ, ಕುರ್ಚಿ

ಬೆಡ್ ಬೇಕೇ ಬೇಕು. ಒಂದು ವೇಳೆ ಇಬ್ಬರು ಮಕ್ಕಳಿದ್ದರೆ ಬಂಕ್ ಬೆಡ್ ಬಳಸುವುದು ಉತ್ತಮ. ಇದರಿಂದ ಜಾಗದ ಉಳಿತಾಯ ಆಗುತ್ತದೆ. ಬೆಡ್‌ನ ಮೇಲೆ ಕವರ್ ಹಾಕಿ. ಕವರ್ ಆಕರ್ಷಕ ಬಣ್ಣದಲ್ಲಿರಲಿ. ಅದು ಲೈಟ್ ವೈಟ್ ಇದ್ದರೆ ಉತ್ತಮ, ಯಾಕೆಂದರೆ ಒಗೆಯಲು ಸುಲಭ. ಅಂತೆಯೇ ಬೆಡ್‌ನ ಕೆಳಗೆ ಎಳೆಯುವ ಡ್ರಾವರ್ ಇದ್ದಲ್ಲಿ ಸ್ಥಳದ ಕೊರತೆ ನೀಗಿಸಬಹುದು. ಅದರೊಳಗೆ ಬಟ್ಟೆಗಳನ್ನು ಹಾಕಿ ಇಡಬಹುದು. ಡ್ರಾವರ್ ಇಲ್ಲವಾದಲ್ಲಿ ಅದರೊಳಗೆ ಡ್ರೆಸ್ ಹಾಕುವ ಬಾಕ್ಸ್‌ಗಳನ್ನು, ಬಕೆಟ್ ಇನ್ನಿತರ ಬಾಕ್ಸ್‌ಐಟಮ್ ಗಳನ್ನು ಅದರೊಳಗೆ ಇಡಬಹುದು. ಇದರಿಂದಲೂ ಸ್ಥಳ ಉಳಿಯುತ್ತದೆ.

★ ಒಂದಿಷ್ಟು ಬಾಕ್ಸ್‌ಗಳು

ಬಾಕ್ಸ್‌ಗಳು ರೂಮಿನಲ್ಲಿ ಚಿಕ್ಕ ಪುಟ್ಟ ಪಾತ್ರಗಳನ್ನು ವಹಿಸುತ್ತವೆ. ಅದರಲ್ಲೂ ಮಕ್ಕಳಿಗೆ ಬೇರೆ ಬೇರೆ ವಸ್ತುಗಳನ್ನು ಹಾಕಿಡಲು ಸಹಕಾರಿ. ಪೆನ್ನು, ಕಲರ್ ಮೆಟೀರಿಯಲ್ಸ್, ಸ್ಟಿಕ್ಕರ್ಸ್, ಆಟಿಕೆ, ಮಾಲೆ, ಬಳೆ– ಹೀಗೆ ಅನೇಕ ವಸ್ತುಗಳನ್ನು ಯದ್ವಾ–ತದ್ವವಾಗಿ ಬಿಸಾಡುವುದಕ್ಕಿಂತ ಅದನ್ನು ಬಾಕ್ಸ್‌ನಲ್ಲಿ ಜಾಗೃತೆಯಿಂದ ಇಡುವುದು ಒಳ್ಳೆಯದು. ಇದರಿಂದ ರೂಮ್ ಗಲೀಜು ಕಾಣಿಸುವುದಿಲ್ಲ. ಇಂತಹ ಬಾಕ್ಸ್‌ಗಳನ್ನು ಕಪಾಟಿನಲ್ಲೋ, ಬೆಡ್ ಕೆಳಗೆಯೋ ಇಡುವುದರಿಂದ ಸ್ಥಳದ ಪೂರ್ಣ ಬಳಕೆಯಾಗುತ್ತದೆ.

★ ವೈಟ್ ಬೋರ್ಡ್, ಡ್ರಾಯಿಂಗ್ ಬೋರ್ಡ್

ವೈಟ್ ಬೋರ್ಡ್ ಇರುವುದರಿಂದ ಅನೇಕ ಪ್ರಯೋಜನಗಳಿವೆ. ಪ್ರಮುಖ ನೋಟ್ಸ್‌ಗಳನ್ನು ಬರೆಯಲು, ವೇಳಾಪಟ್ಟಿ ಮಾಡಲು, ಲೆಕ್ಕ ಮಾಡಲು, ವಿಜ್ಞಾನದ ಚಿತ್ರ ಬರೆಯಲು , ಹೀಗೆ ಅನೇಕ ರೀತಿ ಉಪಯೋಗವಾಗುತ್ತದೆ. ಮಕ್ಕಳಿಗೆ ಚಿತ್ರಕಲೆಯಲ್ಲಿ ಆಸಕ್ತಿ ಇದ್ದಲ್ಲಿ ಡ್ರಾಯಿಂಗ್ ಬೋರ್ಡ್, ಪೈಂಟಿಂಗ್ ಮೆಟೀರಿಯಲ್‌ಗಳನ್ನು ರೂಮ್‌ನಲ್ಲಿ ಇಡಿ. ಅವರಿಗೆ ಆಸಕ್ತಿ ಎನ್ನಿಸಿದಾಗ ಗೀಚಲಿ. ಇದರಿಂದ ಮಕ್ಕಳು ಸೃಜನಾತ್ಮಕತೆಯನ್ನು ಬೆಳೆಸಲು ಅನುಕೂಲವಾಗುತ್ತದೆ.

★ ಕಿಟಕಿಯ ಪಕ್ಕದಲ್ಲಿ ಹಸಿರು

ಮಕ್ಕಳ ರೂಮ್‌ಗಳು ಹಿತ್ತಲ ಪಕ್ಕದಲ್ಲಿ ಅಥವಾ ಹೂದೋಟ ಕಾಣುವ ಸ್ಥಳದ ಬಳಿ ಇದ್ದರೆ ಒಳ್ಳೆಯದು. ಕಿಟಕಿಯಿಂದ ಹೊರನೋಡುವಾಗ ಹಸಿರು ಕಾಣಿಸಿದರೆ ಕಣ್ಣಿನ ಆರೋಗ್ಯಕ್ಕೂ ಒಳ್ಳೆಯದು. ಒಂದು ವೇಳೆ ಕಿಟಕಿಯ ಪಕ್ಕ ಹೂದೋಟ ಇಲ್ಲವಾದಲ್ಲಿ ಕಿಟಕಿಯ ಸಮೀಪ, ಕಿಟಕಿಯ ಎತ್ತರಕ್ಕೆ ಸರಿಯಾಗಿ ಹೂವಿನ ಕುಂಡಗಳನ್ನು ಇರಿಸಿ. ಅಥವಾ ಹ್ಯಾಂಗಿಂಗ್ ಗಾರ್ಡನ್ ಕೂಡಾ ಮಾಡಬಹುದು. ಇದರಿಂದ ಕಿಟಕಿಯ ಸುಂದರ ಕಲೆ ಬರುತ್ತದೆ. ಮಕ್ಕಳಿಗೂ ಹಸಿರು ಪ್ರಜ್ಞೆ ಮೂಡಲು ಸಾಧ್ಯ.

★ ನೆಲಕ್ಕೊಂದು ಕಾರ್ಪೆಟ್

ರೂಮ್‌ನ ಪ್ರವೇಶದಲ್ಲಿಯೇ ಕಾರ್ಪೆಟ್ ಇರಲಿ. ಅಥವಾ ಸೋಫಾದ ಪಕ್ಕ, ಬೆಡ್‌ನ ಪಕ್ಕ ಇದ್ದರೆ ಒಳಿತು. ಕಾರ್ಪೆಟ್ ವಿವಿಧ ರೀತಿಯ ಪ್ರಾಣಿಗಳ ಆಕಾರ– ಮುಂತಾಗಿ ವಿಭಿನ್ನವಾಗಿದ್ದರೆ ರೂಮ್‌ನ ಆಕರ್ಷಣೆ ಇಮ್ಮಡಿಯಾಗುತ್ತದೆ. ಸ್ವಚ್ಛವಾಗಿಡಲೂ ಸಹಕಾರಿ.

ಮಕ್ಕಳ ಕೋಣೆಯಲ್ಲಿ ಸ್ವಚ್ಛತಾ ಸಲಕರಣೆಗಳನ್ನು ಇಟ್ಟುಬಿಡಿ. ಎರಡು ರೀತಿಯಲ್ಲಿ ಇದು ಸಹಕಾರಿ. ಕೋಣೆಯನ್ನು ಸ್ವಚ್ಛವಾಗಿಡುವುದು ತಮ್ಮ ಕರ್ತವ್ಯ ಎನ್ನುವುದನ್ನು ಮಕ್ಕಳಿಗೆ ಇದು ಸದಾ ನೆನಪಿಸುತ್ತದೆ. ಕಸ ಹಾಕುವಾಗ ಎಲ್ಲೆಂದರಲ್ಲಿ ಕಸ ಹಾಕಬಾರದು ಎನ್ನುವುದನ್ನೂ ನೆನಪಿಸುತ್ತದೆ. ಕ್ಲೀನಿಂಗ್ ಸೆಟ್‌ನಲ್ಲಿ ಪೊರಕೆ, ಕಸ ತೆಗೆಯುವ ವಸ್ತು, ಕಸದ ಬುಟ್ಟಿ, ನೆಲ ಒರೆಸುವ ಬಟ್ಟೆ ಮುಂತಾದವು ಇರಲಿ. ಸ್ವಲ್ಪ ಮಟ್ಟದ ಕ್ಲೀನಿಂಗ್ ಮಾಡಲು ಮಕ್ಕಳಿಗೆ ಬಿಟ್ಟುಬಿಡಿ. ಇದರಿಂದ ಅವರ ಮನಸ್ಸಿಗೆ ರಿಲ್ಯಾಕ್ಸ್ ಸಿಗುತ್ತದೆ.

ಜೀವನವೇ ಒಂದು ಕಲೆ. ಈ ಕಲೆಯನ್ನು ಪ್ರತಿಯೋರ್ವರೂ ಎಳೆವೆಯಿಂದಲೇ ಬೆಳೆಸಿಕೊಳ್ಳಬೇಕು. ಮಕ್ಕಳ ರೂಮಿಗೆ ಕಲಾತ್ಮಕ ಸ್ಪರ್ಶ ನೀಡಿದರೆ ಸಿಗುವ ಆನಂದ ದೊಡ್ಡದು. ಮಕ್ಕಳ ಮನಸ್ಸು ಪ್ರಫುಲ್ಲವಾಗಿದ್ದರೆ, ಅವರಿಗೆ ಓದಿನ ಕಡೆಗೆ ಗಮನ ಕೊಡಲೂ ಸಾಧ್ಯವಾಗುತ್ತದೆ.